**ಅಸಲು ದಾವಾ ಸಂ.5/2007**
ಪಿ .ಡಬ್ಲ್ಯೂ-2

ದಿನಾಂಕ 29-11-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃಪ್ರತಿವಾದಿ ಪರ ಶ್ರೀ ಐ ಸಿ ಬಿ ವಕೀಲರಿಂದಃ-**

ಈ ದಾವೆಯನ್ನು ವಾದಿ ತನ್ನ ಆಸ್ತಿ ಸಲುವಾಗಿ ಪ್ರತಿವಾದಿ ವಿರುದ್ದ ದಾಖಲ ಮಾಡಿರುತ್ತಾರೆ. ವಾದಿ ಇವರು ನನ್ನ ಸಹೋದರ ಮಾವನ ಮಗ ಇರುತ್ತಾನೆ. ವಾದಿಯ ತಂಗಿಯಾದ ಮಹಾದೇವಿ ಜೀವಂತ ಇರುತ್ತಾರೆ. ಸಾಕ್ಷಿ ನುಡಿಯಲು ಬರುವ ಮೊದಲು ವಾದಿ ಹಾಜರು ಪಡಿಸಿದ ದಾಖಲೆಗಳ ಮಾಹಿತಿ ಇರುವದಿಲ್ಲ. ಇದೇ ಆಸ್ತಿ ಕುರಿತು ವಾದಿಯ ತಂದೆ ಪಂಡಿತಪ್ಪ ಇವರು ಬಾಗಪ್ಪ ಮತ್ತು ಸೀತವ್ವ ಇವರ ಮೇಲೆ ಅಸಲು ದಾವೆ ನಂಬರ 51/1989 ನ್ನು ದಾಖಲಿಸಿದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಬಾಗಪ್ಪ ಮತ್ತು ಸೀತವ್ವ ಇವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಬಾಗಪ್ಪ ಮರಣ ನಂತರ ಆಸ್ತಿ ಸೀತವ್ವ ಇವರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ಅವರು ವಾದಿಯ ತಂದೆಯಾದ ಪಂಡಿತಪ್ಪ ಇವರಿಗೆ ಹಕ್ಕು ಪತ್ರ ಮೂಲಕ ಆಸ್ತಿ ಬಿಟ್ಟು ಕೊಟ್ಟಿರುತ್ತಾರೆ. ಆಗ ಕಾಲಕ್ಕೆ ನನಗೆ ಮದುವೆ ಆಗಿರುತ್ತದೆ. ನಾನು ಅದಕ್ಕೆ ಸಹಿಯನ್ನು ಮಾಡಿರುವದಿಲ್ಲ. ಸೀತವ್ವ ಇವರು ಜೀವಂತ ಇದ್ದಾಗ ಆಸ್ತಿಯನ್ನು ಪ್ರತಿವಾದಿಗೆ ಖರೀದಿ ಹಾಕಿಕೊಟ್ಟಿರುತ್ತಾರೆಂದರೆ ಸರಿ. ಅಲ್ಲಿ ಪ್ರತಿವಾದಿಯ ತಾಯಿ ಕಸ್ತೂರಿ ಹಾದಿಮನಿ ಇವರು ವಾಸ ಇದ್ದರು ಎಂದರೆ ಸರಿ. ಪ್ರತಿವಾದಿ ಈಗ ಸದರಿ ಆಸ್ತಿಯನ್ನು ಕೊಪರ್ಡೆ ಇವರಿಗೆ ಬಾಡಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅವರು ಗುಂಜಾ ಮಾರಾಟ ಮಾಡುವ ಒಬ್ಬ ವ್ಯಕ್ತಿಗೆ ಬಾಡಿಗೆ ಕೊಟ್ಟಿರುತ್ತಾರೆ. ಸರ್ಕಾರದಿಂದ ಪರವಾಣಿಗೆ ತೆಗೆದುಕೊಂಡು ಪ್ರತಿವಾದಿ ಕಟ್ಟಡ ನಿರ್ಮಾನ ಮಾಡಿರುತ್ತಾರೆ ಎಂದರೆ ಸರಿ. ಬಾಗವ್ವ ಮತ್ತು ಸೀತವ್ವ ಇವರು ಪಂಡಿತಪ್ಪ ಇವರಿಗೆ ಹಕ್ಕು ಬಿಟ್ಟುಕೊಟ್ಟಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲಾ .**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.